ಇ) ಹೌದಾದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರದ ಆದೇಶದ ಸಂಖ್ಯೆ ಹೆಚ್. ಎಫ್. ಡಬ್ಲ್ಯೂ./201/ಸಿಬಿಇ/ ದಿನಾಂಕ 25.05.2005 ರಂತೆ ಆ ಸಲಹಾ ಸಮಿತಿಯನ್ನು ರಚಿಸಲಾಗಿದೆ.

ಆ) ಪರಿಗಣಿಸಲಾಗುತ್ತಿದೆ.

ಇ) ಪರಿಗಣಿಸಿದ ನಂತರ ಕ್ರಮ ಕೈಗೊಳ್ಳಲಾಗುತ್ತದೆ.

5758 (6492) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖಾ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ವಜಲಧಾರ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಬಂದ ಅರ್ಜಿಗಳೆಷ್ಟು ಹಾಗೂ ಸಂಗ್ರಹವಾದ ಹಣ ಎಷ್ಟು :

ಆ) ಈ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಮಂಜೂರಾತಿ ದೊರೆತ ಕಾಮಗಾರಿಗಳೆಷ್ಟು; (ಎಲ್ಲಾ ವಿಷಯಕ್ಕೂ ತಾಲ್ಲೂಕುವಾರು ವಿವರ ಹಾಗೂ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಪ್ರತಿ ಯೋಜನೆಯ ವಿವರ ನೀಡುವುದು);

ಇ) ಜಿಲ್ಲಾವಾರು ಅನುದಾನ ಹಂಚಿಕೆಯಲ್ಲಿ ವ್ಯತ್ಯಾಸವಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ವ್ಯತ್ಯಾಸವಿರಲು ಕಾರಣವೇನು;

ಉ) ಅನುದಾನ ನಿಗಧಿ ಮಾಡಲು ಅನುಸರಿಸುವ ಮಾನದಂಡ ಗಳೇನು;

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖಾ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಸ್ವಜಲಧಾರ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 1506 ಅರ್ಜಿಗಳು ಬಂದಿರುತ್ತವೆ. ಯೋಜನೆಗಳ ಅಂದಾಜು ಮೊತ್ತದ ಶೇ.10/ ರ ಹಣ ರೂ.1022.00 ಲಕ್ಷ ಮೊತ್ತವನ್ನು ಸಮುದಾಯದಿಂದ ಸಂಗ್ರಹಿಸಲಾಗಿರುತ್ತದೆ.

ಆ) ಸ್ವಜಲಧಾರ ಯೋಜನೆಯಡಿ ಕಳೆದ ಮೂರು ವಷಗಳಲ್ಲಿ ಅಂದರೆ: 2002–03, 2003–04 ಹಾಗೂ 2004–05ನೇ ಸಾಲಿನಲ್ಲಿ ಮಂಜೂರಾತಿ ದೊರೆತ ಕಾಮಗಾರಿಗಳ ವಿವರಗಳನ್ನು ಅನುಬಂಧ–1 ರಲ್ಲಿ ಮತ್ತು ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕಿನ ಪ್ರತಿ ಯೋಜನೆಯ ವಿವರಗಳನ್ನು
ಅನುಬಂಧ–2 ರಲ್ಲಿ ನೀಡಿದೆ.

ಇ) ಬಂದಿದೆ.

ಈ) ವ್ಯತ್ಯಾಸಕ್ಕೆ ಇರುವ ಕಾರಣಗಳನ್ನು ಈ ಕೆಳಗೆ ನೀಡಿದೆ:

- 2002–03ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವನೆಗಳ ಮೇಲೆ ಕೇಂದ್ರ ಸರ್ಕಾರವೇ ಜಿಲ್ಲಾವಾರು ಅನುದಾನ ಹಂಚಿಕೆ ಮಾಡಿರುತ್ತದೆ. ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವನೆ ಮೊತ್ತ ರೂ.36.08 ಕೋಟಿಗೆ ಕೇಂದ್ರ ಕೇವಲ ರೂ.2.18 ಕೋಟಿ ಮಾತ್ರ ಅನುದಾನ ಹಂಚಿಕೆ ಮಾಡಿದೆ.

- 2003–04ನೇ ಸಾಲಿನಲ್ಲೂ ಕೂಡ ಕೇಂದ್ರ ಸರ್ಕಾರವೇ ಜಿಲ್ಲಾವಾರು ಅನುದಾನ ಹಂಚಿಕೆಯನ್ನು 2002–03ರ ಸಾಲಿನಂತೆ ಮಾಡಿದ್ದು ತದನಂತರ ಜೂನ್, 2003ರಲ್ಲಿ ಹೊಸ ಮಾರ್ಗದರ್ಶಿ ಸೂತ್ರಗಳನ್ವಯ ರಾಜ್ಯ ಸರ್ಕಾರಕ್ಕೆ ಯೋಜನೆಯ ಅನುಷ್ಠಾನ ಜವಾಬ್ದಾರಿಯನ್ನು ವರ್ಗಾಯಿಸಿದ ಕಾರಣ ರಾಜ್ಯ ಸರ್ಕಾರ ಜಿಲ್ಲೆಗಳ ಬೇಡಿಕೆಗೆ ಅನುಗುಣವಾಗಿ ಅನುದಾನವನ್ನು ಮರು ಹಂಚಿಕೆ ಮಾಡಿರುತ್ತದೆ.
- 200405ನೇ ಸಾಲಿನಲ್ಲಿ ಉತ್ತರ ಕರ್ನಾಟಕ 11 ಜಿಲ್ಲೆಗಳಲ್ಲಿ ವಿಶ್ವ ಬ್ಯಾಂಕ್ ನೆರವಿನ "ಜಲ ನಿರ್ಮಲ" ಯೋಜನೆ ಅನುಷ್ಠಾನ ಗೊಳಿಸುತ್ತಿರುವ ಕಾರಣ ಸದರಿ ಜಿಲ್ಲೆಗಳಿಗೆ ಯಾವುದೇ ಅನುದಾನ ಹಂಚಿಕೆಮಾಡದಿರಲು ಸರ್ಕಾರ ತೀರ್ಮಾನಿಸಿರುತ್ತದೆ. ಮತ್ತು ವಲಯ ಸುಧಾರಣ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದ ಬಳ್ಳಾರಿ ಜಿಲ್ಲೆಗೆ ಪೂರ್ಣ ಅನುದಾನ ಬಿಡುಗಡೆಯಾಗದ ಕಾರಣ ಕೇಂದ್ರ ಸರ್ಕಾರದ ಸೂಚನೆಯಂತೆ ರಾಜ್ಯಕ್ಕೆ ಹಂಚಿಕೆಯಾದ ರೂ.12.53 ಕೋಟಿಗಳಲ್ಲಿ ರೂ. 7.02 ಕೋಟಿಗಳನ್ನು ಹಂಚಿಕೆಮಾಡಿ ಬಾಕಿ ಅನುದಾನವನ್ನು ಬೇಡಿಕೆಗೆ ಅನುಗುಣವಾಗಿ ಇತರೆ ಜಿಲ್ಲೆಗಳಿಗೆ ಹಂಚಿಕೆಮಾಡಿದೆ.
- 200405ನೇ ಸಾಲಿನ ಹೆಚ್ಚುವರಿ ಅನುದಾನವನ್ನು ಹಿಂದಿನ ಸಾಲುಗಳಲ್ಲಿ ಹಂಚಿಕೆಮಾಡಿದ್ದ ಅನುದಾನ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಕಾಮಗಾರಿಗಳನ್ನು ಪ್ರಾರಂಭಿಸಿದ್ದ ಬೆಂಗಳೂರು ಗ್ರಾ. ಕೋಲಾರ, ರಾಯಚೂರು, ತುಮಕೂರು ಮತ್ತು ಉಡುಪಿ ಜಿಲ್ಲೆಗಳಿಗೆ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಸದರಿ ಅನುದಾನ ಹಂಚಿಕೆ ಮಾಡಿರುತ್ತದೆ.

ಊ) ಅನುದಾನ ನಿಗದಿ ಮಾಡಲು ಅನುಸರಿಸುವ ಮಾನದಂಡಗಳನ್ನು ಕೆಳಗೆ ನೀಡಿದೆ:

- ಪ್ರತೀ ದಿನ ತಲಾ 40 ಲೀಟರ್ ಕುಡಿಯುವ ನೀರಿನ ಸೌಲಭ್ಯದಿಂದ ವಂಚಿತ ಜನ ವಸತಿ/ಗ್ರಾಮಗಳು
- ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಜನ ವಸತಿ/ಗ್ರಾಮಗಳು
- ಯೋಜನೆಯ ಮಾರ್ಗದರ್ಶಿಗಳನ್ವಯ ಸಮುದಾಯ ಯೋಜನೆಯ ಒಟ್ಟು ಬಂಡವಾಳ ಮೊತ್ತದಲ್ಲಿನ ತನ್ನ ಪಾಲಿನ ವಂತಿಕೆ ನೀಡಿರುವುದು.

ಅನುಬಂಧ – 1

ಕರ್ನಾಟಕ 12ನೇ ವಿಧಾನಸಭೆ 2ನೇ ಅಧಿವೇಶನದ ಪ್ರಶ್ನೆ ಸಂಖ್ಯೆ 6492 ರ ಲಗತ್ತು ಸ್ವಜಲಧಾರ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಮಂಜೂರಾತಿ ದೊರೆತ ಕಾಮಗಾರಿಗಳ ತಾಲ್ಲೂಕುವಾರು ವಿವರ (2002–03, 2003–04 ಮತ್ತು 2004–05)

ಜಿಲ್ಲೆ ಮತ್ತು ತಾಲ್ಲೂಕು ಹೆಸರು	ಮಂಜೂರಾತಿ ದೊರೆತ ಕಾಮಗಾರಿಗಳ ಸಂಖ್ಯೆ
ಆರ್ಥಿಕ ವರ್ಷ	**2002 – 03**

Haveri	
Byadgi	12
Haveri	9
Raichur	
Manvi	15
Sindhanur	5
Shimoga	
Shikaripura	2
Tumkur	
Tumkur	4
Udupi	
Kundapura	1
Udupi	2
ಒಟ್ಟು	50

ಜಿಲ್ಲೆ ಮತ್ತು ತಾಲ್ಲೂಕು ಹೆಸರು	ಮಂಜೂರಾತಿ ದೊರೆತ ಕಾಮಗಾರಿಗಳ ಸಂಖ್ಯೆ
ಆರ್ಥಿಕ ವರ್ಷ	**2003 – 04**
Bagalkore	
Badami	2
Bagalkore	1
Bilgi	1
Hungund	2
Jamakhandi	3
Bangalore Rural	
Devanhalli	1
Doddaballapur	1
Hoskote	2
Kanakapura	9
Magadi	5
Bangalore Urban	

Anekal	3
Bangalore East	1
Bangalore North	1
Bangalore South	4
Belgaum	
Athani	2
Bailahongal	3
Belgaum	3
Chikodi	2
Gokak	3
Soundatti	1
Bidar	
Aurad	6
Basavakalyan	1
Bhalki	3
Bidar	3
Humnabad	5
Bijapur	
Bijapur	2
Muddebihal	1
Chamaraja Nagara	
Chamarajanagara	11
Gundlupet	1
Kollegal	4
Chikmagalur	
Chikmagalur	1
Kadur	1
Koppa	2
Mudigere	1
Narasimharajapura	1
Sringeri	1
Tarikere	1

Chitradurga	
Challakere	4
Holalkere	1
Davanagere	
Channagiri	2
Davanagere	2
Harpanahalli	1
Dharwar	
Hubli	2
Kaghatgi	2
Gadag	
Gadag	5
Mundargi	2
Ron	7
Gulbarga	
Aland	1
Chincholi	4
Chitapur	8
Gulbarga	4
Jevargi	1
Shahapur	1
Shorapur	2
Yadgir	3
Hassan	
Alur	1
Arasikere	1
Arkalgud	1
Belur	1
Channarayapatna	1
Hassan	1
Holenarsipur	2
Haveri	

Byadgi	8
Haveri	14
Kodagu	
Madikerei	2
Somvarpet	4
Virajpet	5
Kolar	
Bangarapet	1
Chikballapur	1
Chintamani	2
Gowribidanur	1
Kolar	2
Malur	1
Sidlaghatta	1
Srinivaspur	1
Koppal	
Gangavathi	2
Mandya	
Maddur	2
Malavalli	2
Mandya	3
Srirangapattana	1
Raichur	
Sindhanur	2
Shimoga	
Bhadravathi	4
Hosanagara	2
Sagar	13
Shikaripura	5
Shimoga	2
Sorab	17
Thirthahalli	2

Tumkur	
Kunigal	1
Sira	4
Tiptur	1
Tumkur	14
Udupi	
Karkal	1
Kundapura	4
Udupi	5
Uttara Kannada	
Ankola	1
Honavar	3
Karwar	2
Siddapur	3
Sirsi	1
Supa	1
Yellapur	4
ಒಟ್ಟು	300

ಜಿಲ್ಲೆ ಮತ್ತು ತಾಲ್ಲೂಕು ಹೆಸರು	ಮಂಜೂರಾತಿ ದೊರೆತ ಕಾಮಗಾರಿಗಳ ಸಂಖ್ಯೆ
ಆರ್ಥಿಕ ವರ್ಷ	**2004 – 05**
Bangalore Rural	
Doddaballapur	3
Kanakpura	10
Nelemangala	1
Bangalore Urban	
Anekal	3
Banaglore East	1
Bangalore South	2
Bellary	
Bellary	61

Chamaraja Nagara	
Chamarajanagara	1
Gundlupet	1
Kollegal	2
Chikmagalur	
Chikmagalur	3
Kadur	1
Mudigere	8
Tarikere	1
Chitradurga	
Chitradurga	1
Davanagere	
Channagiri	2
Davangere	4
Hassan	
Alur	1
Arasikere	1
Belur	1
Channarayapatna	2
Hassan	1
Skaleshpura	1
Kodagu	
Madikeri	1
Somvarpet	1
Virajpet	3
Kolar	
Chikballapur	1
Chintamani	1
Gowribidanur	1
Kolar	2
Mandya	
Maddur	2

Mandya	2
Shimoga	
Bhadravathi	1
Hosanagara	3
Sagar	5
Shikaripura	5
Shimoga	2
Sorab	3
Thirthahalli	1
Tumkur	
Kunigal	9
Sira	8
Turuvekere	1
Udupi	
Kundapura	3
Udupi	4
ಒಟ್ಟು	112

ಜಿಲ್ಲೆ ಮತ್ತು ತಾಲ್ಲೂಕು ಹೆಸರು	ಮಂಜೂರಾತಿ ದೊರೆತ ಕಾಮಗಾರಿಗಳ ಸಂಖ್ಯೆ
ಆರ್ಥಿಕ ವರ್ಷ	**2004 – 05 Addl**
Bangalore Rural	
Devanhalli	1
Hoskote	3
Kanakapura	6
Magadi	2
Kolar	
Bagepalli	1
Kolar	2
Malur	2
Sidlaghatta	2
Srinivaspur	2

Raichur	
Manvi	3
Sindhanur	1
Tumkur	
Kunigal	5
Sira	2
Tumkur	2
Udupi	
Karkal	1
Kundapura	2
Udupi	1
ಒಟ್ಟು	38

ಅನುಬಂಧ – 2

(ಕರ್ನಾಟಕ ವಿಧಾನಸಭೆ ಪ್ರಶ್ನೆ ಸಂಖ್ಯೆ : 4692 ರ ಲಗತ್ತು)

ಸ್ವಜಲಧಾರ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಅಂದರೆ: 2002–03, 2003–04 ಹಾಗೂ 2004–05ನೇ ಸಾಲಿನಲ್ಲಿ ಮಂಜೂರಾತಿ ದೊರೆತ ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕಿನ ಪ್ರತಿ ಯೋಜನೆಯ ವಿವರಗಳು.

ಕ್ರ. ಸಂ.	ತಾಲ್ಲೂಕು	ಗ್ರಾ. ಪಂ. ಹೆಸರು	ಗ್ರಾಮದ ಹೆಸರು	ಯೋಜನೆಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
ಆರ್ಥಿಕ ವರ್ಷ – 2003–04				
1	ಹೊಸ ನಗರ	ಹೆಡ್ಡಾರಿ ಪುರ	ಕಲ್ಲೂರು	8.00
2		ಎಂ. ಗುಡ್ಡೆಕೊಪ್ಪ	ಚಿಕ್ಕಪೇಟೆ ಮುದುಗುಪ್ಪ	0.60
3	ತೀರ್ಥಹಳ್ಳಿ	ಗುಡ್ಡೆಕೊಪ್ಪ	ಜಂಬೆ	4.00
4		ಹೆದ್ದೂರು	ಹೆದ್ದೂರು	10.00
ಆರ್ಥಿಕ ವರ್ಷ – 2004–05				
1	ಹೊಸನಗರ	ಹುಮ್ಚಾ	ಹೊನ್ನೇಬೈಲು ಸುರಗನಹಳ್ಳಿ ಮಜರೆ	0.70

2		ಕೆಂಚನಾಳ	ವಡ್ಡಿನಗದ್ದೆ.	0.75
3		ಕೊಡೂರು	ಶಂಕವಳ್ಳಿ	0.75
4	ತೀರ್ಥಹಳ್ಳಿ	ನೆರಟೂರು	ಬೊಬ್ಬಿ	3.00

5759 (6493) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಿಥಿಲಗೊಂಡ/ದುರಸ್ತಿ ಅಗತ್ಯವಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು; [ಜಿಲ್ಲಾವಾರು, ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು]:

ಆ) ಇದಕ್ಕೆ ಬೇಕಾದ ಹಣ ಎಷ್ಟು ಹಾಗೂ ಯಾವಾಗ ಅಂದಾಜು ಮಾಡಲಾಗಿದೆಯೇ: [ವಿವರ ನೀಡುವುದು]

ಇ) ಈ ಸಾಲಿನಲ್ಲಿ, ಈ ಬಾಬ್ತಿಗೆ ನಿಗದಿ ಮಾಡಿದ ಹಣ ಎಷ್ಟು;

ಈ) ಮಳೆ ಹೆಚ್ಚಿರುವ ಮಲೆನಾಡು ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ದುರಸ್ತಿ ಕಾರ್ಯವನ್ನು ತಕ್ಷಣ ಕೈಗೊಳ್ಳದಿದ್ದಲ್ಲಿ ಮಕ್ಕಳು ಹಾಗೂ ಶಿಕ್ಷಕರು ಅಪಾಯಕ್ಕೆ ಸಿಲುಕುವರು ಎಂಬ ಅಂಶ ಸರ್ಕಾರದ ಗಮನದಲ್ಲಿದೆಯೇ:

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಶಿಥಿಲಗೊಂಡ ದುರಸ್ತಿ ಅಗತ್ಯವಿರುವ ಸರ್ಕಾರಿ ಶಾಲೆಗಳ ಸಂಖ್ಯೆ 15174 ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ. 1472

[ಜಿಲ್ಲಾವಾರು ವಿವರವನ್ನು ಅನುಬಂಧ1 ರಲ್ಲೂ ಹಾಗೂ ಶಿಮಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರವನ್ನು ಅನುಬಂಧ – 2 ರಲ್ಲೂ ಒದಗಿಸಲಾಗಿದೆ.]

ಆ) ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳ ದುರಸ್ತಿಗಾಗಿ ರೂ.162.85 ಲಕ್ಷ ಹಾಗೂ ಪ್ರೌಢಶಾಲಾ ದುರಸ್ತಿಗಾಗಿ ರೂ.41.85 ಲಕ್ಷಗಳು ಬೇಕಾಗಿದೆ ಎಂದು ಅಂದಾಜು ಮಾಡಲಾಗಿದೆ.

ಇ) 2005–06ನೇ ಸಾಲಿಗೆ ಸರ್ವ ಶಿಕ್ಷಾ ಅಭಿಯಾನದಡಿ ರೂ.95.50 ಲಕ್ಷಗಳನ್ನು ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲಾ ದುರಸ್ತಿಗಾಗಿ ಬಿಡುಗಡೆ ಮಾಡಲಾಗಿದೆ. ಸರ್ಕಾರಿ ಪ್ರೌಢಶಾಲಾ ದುರಸ್ತಿಗಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಆದರೆ ಈ ಸಾಲಿಗೆ ಈ ಬಾಬ್ತಿಗೆ ರೂ.1000.00 ಲಕ್ಷಗಳನ್ನು ನಿಗದಿ ಮಾಡಲಾಗಿದ್ದು ಅದನ್ನು ಸಧ್ಯದಲ್ಲಿಯೇ ಜಿಲ್ಲಾವಾರು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುವುದು.

ಈ) ಗಮನಕ್ಕೆ ಬಂದಿದೆ. ಅನುದಾನ ಬಿಡುಗಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.